ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**540**
ಸದಸ್ಯರ ಹೆಸರು	:	ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	21-02-2022
ಉತ್ತರಿಸುವ ಸಚಿವರು	:	ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

****

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr>
<td>ಅ)</td>
<td>ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಇರುವ ವಿದ್ಯುತ್ ಬೇಡಿಕೆ ಪ್ರಮಾಣ ಎಷ್ಟು; ಪೂರೈಸಿದ ವಿದ್ಯುತ್ ಪ್ರಮಾಣ ಎಷ್ಟು; ಸರ್ಕಾರಿ ವಿದ್ಯುತ್ ಕಂಪನಿಗಳಿಂದ ಉತ್ಪಾದಿಸಿದ ಪ್ರಮಾಣವೆಷ್ಟು; ಖಾಸಗಿ ವಿದ್ಯುತ್ ಉತ್ಪಾದಕ ಕಂಪನಿಗಳು ಉತ್ಪಾದಿಸಿದ ಪ್ರಮಾಣವೆಷ್ಟು; ಸರ್ಕಾರದಿಂದ ಖರೀದಿಸಿದ ಪ್ರಮಾಣವೆಷ್ಟು; ಈ ಕುರಿತು ಪಾವತಿಸಿದ ಮೊತ್ತವೆಷ್ಟು; (ವರ್ಷವಾರು, ಕಂಪನಿವಾರು ಮಾಹಿತಿ ನೀಡುವುದು)</td>
<td>
ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಬೇಡಿಕೆ ಮತ್ತು ಪೂರೈಸಲಾದ ವಿದ್ಯುತ್ತಿನ ಪ್ರಮಾಣದ ವಿವರಗಳು ಕೆಳಕಂಡಂತಿವೆ:
<table>
<tr><th>ವರ್ಷ</th><th>ಬೇಡಿಕೆ (ಮಿ.ಯೂ. ಗಳಲ್ಲಿ)</th><th>ಪೂರೈಕೆ (ಮಿ.ಯೂ. ಗಳಲ್ಲಿ)</th><th>ಷರಾ</th></tr>
<tr><td>2018-19</td><td>76145.47</td><td>76145.47</td><td rowspan="2">ಬೇಡಿಕೆಗೆ ಸೀಮಿತವಾಗಿ ವಿದ್ಯುತ್ ಪೂರೈಕೆ ಯಾಗುತ್ತಿದೆ.</td></tr>
<tr><td>2019-20</td><td>75128.87</td><td>75128.87</td></tr>
<tr><td>2020-21</td><td>71286.69</td><td>71271.69</td><td>ಮಾರ್ಚ್-21ರ ಮಾಹೆಯಲ್ಲಿ ಉಷ್ಣ ವಿದ್ಯುತ್ ಘಟಕಗಳ ಅನಿರೀಕ್ಷಿತ ವಿಫಲತೆಯಿಂದಾಗಿ 15ಮಿ.ಯೂ.ಗಳಷ್ಟು ತಾತ್ಕಾಲಿಕ ವಿದ್ಯುತ್ ಕಡಿತ ಮಾಡಲಾಗಿರುತ್ತದೆ.</td></tr>
<tr><td>2021-22 (ಏಪ್ರಿಲ್-21 ರಿಂದ ಜನವರಿ-22 ವರೆಗೆ)</td><td>59099.13</td><td>59099.13</td><td>ಬೇಡಿಕೆಗೆ ಸೀಮಿತವಾಗಿ ವಿದ್ಯುತ್ ಪೂರೈಕೆ ಯಾಗುತ್ತಿದೆ.</td></tr>
</table>
ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ವಿದ್ಯುತ್ ಕಂಪನಿಗಳಿಂದ ಮತ್ತು ಖಾಸಗಿ ವಿದ್ಯುತ್ ಉತ್ಪಾದಕ ಕಂಪನಿಗಳಿಂದ ಲಭ್ಯವಾದ ವಿದ್ಯುತ್ ಪ್ರಮಾಣದ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.
ಕಳೆದ ಮೂರು ವರ್ಷಗಳಲ್ಲಿ ಖರೀದಿಸಿದ ವಿದ್ಯುತ್ ಪ್ರಮಾಣದ ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.
</td>
</tr>
</table>

...2

ಆ)	ಸರ್ಕಾರದ ಬೆಳಕು ಯೋಜನೆಯ ಮಾರ್ಗಸೂಚಿಗಳು ಯಾವುವು; ಸಲ್ಲಿಸಬೇಕಾದ ದಾಖಲಾತಿಗಳು ಯಾವುವು; ಸರ್ಕಾರಿ ಸ್ಥಳದಲ್ಲಿ ನಿರ್ಮಿಸಿದ ಮತ್ತು ಹಕ್ಕುಪತ್ರ ಕಟ್ಟಡ ಸಂಖ್ಯೆಯನ್ನು ಹೊಂದದ ಮನೆಗಳಿಗೆ ಈ ಯೋಜನೆಯಲ್ಲಿ ವಿದ್ಯುತ್ ಸಂಪರ್ಕ ನೀಡಲಾಗುತ್ತದೆಯೇ;	ಸರ್ಕಾರದ ಆದೇಶ ದಿನಾಂಕ: 29.09.2021 ರನ್ವಯ ದೀನ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ (ಡಿ.ಡಿ.ಯು.ಜಿ.ಜಿ.ವೈ) ಹಾಗೂ ಸೌಭಾಗ್ಯ ಯೋಜನೆಗಳ ಅಡಿಯಲ್ಲಿ ನೀಡಲಾದ ಮಾರ್ಗಸೂಚಿಗಳ ಪ್ರಕಾರ ರೇಷನ್ ಕಾರ್ಡ್, ಆಧಾರ್ ಕಾರ್ಡ್, ವೋಟರ್ ಐ.ಡಿ ಹಾಗೂ ಗ್ರಾಮ ಪಂಚಾಯಿತಿ ಒದಗಿಸುವ ಮನೆಗಳ ಪಟ್ಟಿ ಆಧಾರದ ಮೇಲೆ ಬೆಳಕು ಯೋಜನೆಯಡಿಯಲ್ಲಿ ವಿದ್ಯುತ್ ರಹಿತ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ.
ಇ)	ಮೆಸ್ಕಾಂನವರು ಫಲಾನುಭವಿಗಳು ಈ ಯೋಜನೆಯಡಿ ಅರ್ಜಿ ಸಲ್ಲಿಸಿದಾಗ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಂದ ಮನೆ ಪಟ್ಟಿ ಮತ್ತು ನಿರಾಕ್ಷೇಪಣಾ ಪತ್ರವನ್ನು ಕೋರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಗ್ರಾಮ ಪಂಚಾಯಿತಿಗಳು ದಾಖಲಾತಿ ಹೊಂದಿರದ ಈ ಮನೆಗಳ ಪಟ್ಟಿ ಮತ್ತು ನಿರಾಕ್ಷೇಪಣಾ ಪತ್ರ ನೀಡದಿರುವುದರಿಂದ ಯೋಜನೆಗೆ ಆಗುತ್ತಿರುವ ಸಮಸ್ಯೆಯನ್ನು ನಿವಾರಿಸಲು ಸರ್ಕಾರದ ಕ್ರಮವೇನು?	ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕ ಇಲ್ಲದೇ ಇರುವ ಬಗ್ಗೆ ಸಂಬಂಧಪಟ್ಟ ಸ್ಥಳೀಯ ಆಡಳಿತದಿಂದ ಶಿಫಾರಸ್ಸು ಮಾಡಲಾಗಿರುವ ಪಟ್ಟಿಯ ಫಲಾನುಭವಿಗಳ ಆಧಾರ್ ಕಾರ್ಡ್ / ಪಡಿತರ ಚೀಟಿಯನ್ನು ಪಡೆದು (ಯಾವುದೇ ನಿರಾಕ್ಷೇಪಣಾ ಪತ್ರ ಕೋರದೆ) ಬೆಳಕು ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದ್ದು, ಸದರಿ ಯೋಜನೆಯನ್ನು ನಿಯಮಾನುಸಾರ ಅನುಷ್ಠಾನಗೊಳಿಸಲಾಗುತ್ತಿದೆ.

ಸಂಖ್ಯೆ: ಎನರ್ಜಿ 30 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು

ಅನುಬಂಧ-1

ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ವಿದ್ಯುತ್ ಕಂಪನಿಗಳಿಂದ ಮತ್ತು ಖಾಸಗಿ ವಿದ್ಯುತ್ ಉತ್ಪಾದಕ ಕಂಪನಿಗಳಿಂದ ಲಭ್ಯವಾದ ವಿದ್ಯುತ್ ಪ್ರಮಾಣದ ವಿವರಗಳು:

(ಮಿ.ಯೂ.ಗಳಲ್ಲಿ)

ಸರ್ಕಾರಿ ವಿದ್ಯುತ್ ಕಂಪನಿಗಳು:					
ಕ್ರಮ ಸಂಖ್ಯೆ	ವಿದ್ಯುತ್ತಿನ ಮೂಲಗಳು	**2018-19**	**2019-20**	**2020-21**	**2021-22** (ಜನವರಿ -22 ರ ವರೆಗೆ)
1	ಜಲ ವಿದ್ಯುತ್	11994.53	13805.98	12560.864	11046.786
2	ಶಾಖೋತ್ಪನ್ನ	12554.72	11845.10	9491.864	13959.643
3	ಕೇಂದ್ರ ಸರ್ಕಾರ ಸ್ವಾಮ್ಯದ ವಿದ್ಯುತ್ ಉತ್ಪಾದನಾ ಘಟಕಗಳಿಂದ ರಾಜ್ಯದ ಪಾಲು	24170.84	17880.55	18584.380	9634.59
4	ಪವನ (ಕೆಪಿಸಿ)	5.015	7.19	7.447	5.199
5	ಸೋಲಾರ್ (ಕೆಪಿಸಿ)	30.24	39.58	41.306	39.198
ಒಟ್ಟು		**48755.35**	**43578.41**	**40685.86**	**34685.416**

ಖಾಸಗಿ ವಿದ್ಯುತ್ ಉತ್ಪಾದಕ ಕಂಪನಿಗಳು					
ಕ್ರಮ ಸಂಖ್ಯೆ	ವಿದ್ಯುತ್ತಿನ ಮೂಲಗಳು	**2018-19**	**2019-20**	**2020-21**	**2021-22** (ಜನವರಿ -22 ರ ವರೆಗೆ
1	ಅಸಂಪ್ರದಾಯಿಕ ಮೂಲಗಳಿಂದ	22047.67	27887.553	27925.468	22744.378
2	ಬೃಹತ್ ಐಪಿಪಿ	4898.36	3032.11	2158.944	1172.503
3	ಜಿಂದಾಲ್	444.1	630.81	501.417	497.121
ಒಟ್ಟು		**27390.13**	**31550.47**	**30585.83**	**24414.002**

ಅನುಬಂಧ-2

ಕಳೆದ ಮೂರು ವರ್ಷಗಳಲ್ಲಿ ಖರೀದಿಸಿದ ವಿದ್ಯುತ್ ಪ್ರಮಾಣದ ವಿವರಗಳು ಕೆಳಕಂಡಂತಿವೆ.

2018-19			
ಕಂಪನಿ ಹೆಸರು	**ಖರೀದಿಸಿದ ವಿದ್ಯುತ್ ಪ್ರಮಾಣ (ಮಿಲಿಯನ್ ಯುನಿಟ್)**	**ಸರಾಸರಿ ದರ ಪ್ರತಿಯೂನಿಟ್‌ಗೆ (ರೂ.ಗಳಲ್ಲಿ)**	**ಮೊತ್ತ ಒಟ್ಟು ರೂ ಕೋಟಿಗಳಲ್ಲಿ (ಒಪನ್ ಆಕ್ಸಿಸ್‌ನ್ನು ಸಹ ಒಳಗೊಂಡಿದೆ)**
ಅಲ್ಪಾವಧಿ ಅಡಿಯಲ್ಲಿ ವಿದ್ಯುತ್ ಖರೀದಿ			
ಗ್ಲೋಬಲ್ ಎನರ್ಜಿ ಪ್ರೈವೇಟ್ ಲಿಮಿಟೆಡ್ – 200 ಮೆವ್ಯಾ) – ಸೆಂಬ್ ಕಾರ್ಪ್ - ಆಂಧ್ರ	274.79	4.08	112.11
ಗ್ಲೋಬಲ್ ಎನರ್ಜಿ ಪ್ರೈವೇಟ್ ಲಿಮಿಟೆಡ್ – 300 ಮೆವ್ಯಾ) – ಸೆಂಬ್ ಕಾರ್ಪ್ - ಆಂಧ್ರ	275.37	4.08	112.35
ಪಿಟಿಸಿ ಇಂಡಿಯಾ ಲಿಮಿಟೆಡ್ – 100 (ಜೆ.ಪಿ, ಮಧ್ಯ ಪ್ರದೇಶ್)	108.57	4.08	44.30
ಶ್ರೀ ಸಿಮೆಂಟ್ಸ್ – 100 ಮೆವ್ಯಾ, ರಾಜಸ್ಥಾನ	104.97	4.08	42.83
ಜೆಎಸ್‌ಡಬಲ್ಯು ಎನರ್ಜಿ ಲಿಮಿಟೆಡ್ 200 ಮೆವ್ಯಾ	202.13	4.08	82.47
ಇಂಡಿಯನ್ ಎನರ್ಜಿ ಎಕ್ಸ್‌ಚೇಂಜ್ (ಐಇಎಕ್ಸ್)	0.26	4.21	0.11
ಒಟ್ಟು ಖರೀದಿ	966.09	4.08	394.17
ಅಲ್ಪಾವಧಿ ಅಡಿಯಲ್ಲಿ ವಿದ್ಯುತ್ ಮಾರಾಟ			
ಆಂಧ್ರ ಪ್ರದೇಶ ರಾಜ್ಯಕ್ಕೆ ಓವರ್ ಆರ್ಚಿಂಗ್ ಒಪ್ಪಂದಡಿಯಲ್ಲಿ ವಿದ್ಯುತ್ ಮಾರಾಟ	-0.90	8.35	-0.75
ಇಂಡಿಯನ್ ಎನರ್ಜಿ ಎಕ್ಸ್‌ಚೇಂಜ್ (ಐಇಎಕ್ಸ್) ನಲ್ಲಿ ವಿದ್ಯುತ್ ಮಾರಾಟ	-802.64	4.22	-338.73
ಒಟ್ಟು ಮಾರಾಟ	-803.54	4.22	-339.48
ನಿವ್ವಳ ಖರೀದಿ	162.29	3.36	54.58

2019-20

ಟಿಪ್ಪಣಿ: ಸದರಿ ಸಾಲಿನಲ್ಲಿ ಪಿಸಿಕೆಎಲ್ ವತಿಯಿಂದ ಯಾವುದೇ ಅಲ್ಪಾವದಿ ವಿದ್ಯುತ್ ಖರೀದಿ ಮಾಡಿರುವುದಿಲ್ಲ.

2020-21			
ಕಂಪನಿ ಹೆಸರು	ವಿದ್ಯುತ್ ಪ್ರಮಾಣ (ಮಿಲಿಯನ್ ಯುನಿಟ್)	ಸರಾಸರಿ ದರ ಪ್ರತಿಯೂನಿಟ್ ಗೆ (ರೂ.ಗಳಲ್ಲಿ)	ಮೊತ್ತ ಒಟ್ಟು ರೂ ಕೋಟಿಗಳಲ್ಲಿ (ಒಪನ್ ಆಕ್ಸಿಸ್‌ನ್ನು ಸಹ ಒಳಗೊಂಡಿದೆ)
ಅಲ್ಪಾವದಿ ಅಡಿಯಲ್ಲಿ ವಿದ್ಯುತ್ ಖರೀದಿ			
ಇಂಡಿಯನ್ ಎನರ್ಜಿ ಎಕ್ಸಚೇಂಜ್ (ಐಇಎಕ್ಸ್ ನ ಮುಖಾಂತರ ಮಾರ್ಚ್ – 2021ರ ಮಾಹೆಯಲ್ಲಿ)	4.83	4.94	2.38
ಒಟ್ಟು	4.83	4.94	2.38

2021-22 (31.01.2022 ರವರೆಗೆ)

ಟ್ಿಪ್ಪಣಿ: ಸದರಿ ಸಾಲಿನಲ್ಲಿ ಅಂದರೆ ಜನವರಿ 2022 ಅಂತ್ಯದವರೆಗೂ ಪಿಸಿಕೆಎಲ್ ವತಿಯಿಂದ ಯಾವುದೇ ಅಲ್ಪಾವಧಿ ವಿದ್ಯುತ್ ಖರೀದಿ ಮಾಡಿರುವುದಿಲ್ಲ.